‘ಇದೇನು ಇಷ್ಟು ಬೇಗ ಎದ್ದಿದ್ದೀಯಾ ಸ್ಯಾಮ್?’ ಸ್ವಲ್ಪ ಸಮಯದ ನಂತರ ಬಿಲ್ ಕೇಳಿದ.

‘ಹಾಳಾದ್ದು ಈ ಭುಜದ ನೋವು ನಿದ್ದೆ ಮಾಡಗೊಡುತ್ತಿಲ್ಲ ಬಿಲ್... ಅದಕ್ಕೇ...’

‘ನೀನೊಬ್ಬ ಸುಳ್ಳ ಸ್ಯಾಮ್... ಅಷ್ಟೇ ಅಲ್ಲ, ಪುಕ್ಕಲ ಕೂಡ!’ ಬಿಲ್ ಹೇಳಿದ, ‘ಬೆಳಗಿನ ಜಾವ ನಿನ್ನನ್ನು ಸುಟ್ಟು ಹಾಕುತ್ತೇನೆಂದು ಹುಡುಗ ಹೇಳಿದ್ದಾನೆ! ನೀನು ಹೆದರಿಕೊಂಡಿದ್ದೀಯಾ! ಕೈಗೆ ಬೆಂಕಿಪಟ್ಟಣ ಸಿಕ್ಕಿದರೆ ಖಂಡಿತವಾಗಿಯೂ ಅವನು ಹಿಂದೆ ಮುಂದೆ ನೋಡುವವನಲ್ಲ! ಸ್ವಲ್ಪ ಯೋಚಿಸಿ ನೋಡು ಸ್ಯಾಮ್. ಇಂತಾ ಸೈತಾನ ಹುಡುಗನನ್ನು ಯಾವ ತಂದೆ ತಾನೇ ಒತ್ತೆ ಹಣ ಕೊಟ್ಟು ಬಿಡಿಸಿಕೊಂಡು ಹೋಗಲು ತಯಾರಿದ್ದಾನೆ?!’

‘ನಿನಗೆ ಗೊತ್ತಿಲ್ಲ ಬಿಲ್. ಇಂತಾ ಉಡಾಳ ಹುಡುಗರನ್ನೇ ಹೆತ್ತವರು ಹೆಚ್ಚು ಪ್ರೀತಿಸೋದು! ನೀನು ತಿಂಡಿಗೆ ತಯಾರಿ ಮಾಡು. ನಾನು ಗುಡ್ಡದ ಮೇಲೆ ನಿಂತು ಹಳ್ಳಿಯ ಕಡೆಗೊಮ್ಮೆ ದೃಷ್ಟಿ ಹಾಯಿಸಿ ಬರುತ್ತೇನೆ.’

ನಾನು ಗುಡ್ಡ ಹತ್ತಿ ಹಳ್ಳಿಯ ಕಡೆಗೊಮ್ಮೆ ದೃಷ್ಟಿ ಹರಿಸಿದೆ. ಹಳ್ಳಿಯ ಜನರೆಲ್ಲ ಕೈಗೆ ಸಿಕ್ಕ ಆಯುಧಗಳನ್ನು ಹಿಡಿದು ಹುಡುಗನನ್ನು ಹುಡುಕುತ್ತಾ ಬರುತ್ತಿರುವ ದೃಶ್ಯವನ್ನು ನಾನು ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದೆ. ಅಂತಾದ್ದೇನೂ ನನಗೆ ಕಾಣಿಸಲಿಲ್ಲ. ಎಲ್ಲೆಡೆ ಶಾಂತವಾಗಿತ್ತು. ಬಹಳ ದೂರದಲ್ಲಿ ಯಾವನೋ ಒಬ್ಬಂಟಿ ರೈತನೊಬ್ಬ ಹೊಲ ಉಳುತ್ತಿದ್ದ.

‘ಬಹುಶಃ ಕುರಿಮರಿಯನ್ನು ತೋಳ ಹೊತ್ತೊಯ್ದಿರುವುದು ಕುರುಬನಿಗಿನ್ನೂ ಗೊತ್ತಾಗಿರಲಾರದು!’ ನಾನೆಂದುಕೊಂಡೆ.

## 5

ನಾನು ಗುಹೆಯ ಬಳಿ ಬಂದಾಗ ಬಿಲ್ ಹೊರಗಡೆ ನಿಂತಿದ್ದ. ಅವನ ಮುಖದಲ್ಲಿ ಆತಂಕ ಎದ್ದು ಕಾಣುತ್ತಿತ್ತು, ಹುಡುಗನ ಕೈಯಲ್ಲಿ ತೆಂಗಿನಕಾಯಿ ಗಾತ್ರದ ಕಲ್ಲಿತ್ತು. ಅದನ್ನು ಬಿಲ್‌ನ ತಲೆಗೆ ಹೊಡೆಯಲು ಅವನು ನಿರ್ಧರಿಸಿದಂತಿತ್ತು. ನನ್ನನ್ನು ನೋಡುತ್ತಿದ್ದಂತೆ ಬಿಲ್,

‘ಈ ದರಿದ್ರ ಹುಡುಗ ಬಗ್ಗಿ ಬೆಂಕಿ ಉರುಬುತ್ತಿದ್ದ ನನ್ನ ಬೆನ್ನ ಹಿಂದೆ ಶರ್ಟಿನೊಳಗೆ ಬಿಸಿ ಬಿಸಿ ಆಲೂಗಡ್ಡೆಯನ್ನ ಹಾಕಿದಷ್ಟೇ ಅಲ್ಲದೆ ಅದನ್ನು ಕಾಲಿಂದ ತುಳಿದು ಅಪ್ಪಚ್ಚಿ ಮಾಡಿದ್ದಾನೆ. ನೋವು, ಉರಿ ತಡೆಯಲಾರದೆ ಅವನ ಕಿವಿ ಹಿಂಡಿದೆನಷ್ಟೇ! ಸ್ಯಾಮ್... ನಿನ್ನ ಬಳಿ ಪಿಸ್ತೂಲು ಇದೆ ತಾನೆ?’ ಕಂಪಿಸುವ ಧ್ವನಿಯಲ್ಲಿ ಬಿಲ್ ಹೇಳಿದ.

ನಾನು ಹುಡುಗನ ಕೈಯಿಂದ ಕಲ್ಲನ್ನು ಬಿಡಿಸುತ್ತಾ ಅವನನ್ನು ಸಮಧಾನಪಡಿಸಿದೆ. ‘ನಿನ್ನನ್ನು ನೋಡಿಕೊಳ್ಳುತ್ತೇನೆ... ರೆಡ್ ಇಂಡಿಯನ್ ಯಜಮಾನನನ್ನು ಕೆಣಕಿ ಈವರೆಗೆ ಬದುಕಿದವರು ಯಾರೂ ಇಲ್ಲ! ಹುಶಾರ್!!’ ಬಿಲ್‌ನನ್ನು ಉದ್ದೇಶಿಸಿ ಅವಡುಗಚ್ಚುತ್ತಾ ಪೂತ್ಕರಿಸಿದ ಹುಡುಗ.

ತಿಂಡಿ ಮುಗಿಯುತ್ತಿದ್ದಂತೆ ಹುಡುಗ ತನ್ನ ಜೇಬಿಂದ ಕವಣೆಯನ್ನು ತೆಗೆದು ಹೊರನಡೆಯುತ್ತಿದ್ದಂತೆ ನಾವು ಸಮಾಧಾನದ ನಿಟ್ಟುಸಿರು ಬಿಟ್ಟೆವು.

‘ಅವನು ಓಡಿಹೋಗುವುದಿಲ್ಲ ತಾನೆ ಸ್ಯಾಮ್?’ ಬಿಲ್ ಕೇಳಿದ.

‘ಏನೂ ಆತಂಕ ಬೇಡ. ಅವನೇನು ಅಮ್ಮನ ಮಡಿಲು ನೆನೆದು ಅಳುವ ಹುಡುಗನಂತೆ ಖಂಡಿತ ಕಾಣಿಸುತ್ತಿಲ್ಲ. ಈಗ ಅವನ ಅಪ್ಪನಿಂದ ಒತ್ತೆ ಹಣವನ್ನು ಹೇಗೆ ವಸೂಲು ಮಾಡುವುದೆಂದು ನಾವು ಪ್ಲಾನ್ ಮಾಡಬೇಕು. ಹುಡುಗನ ಊರು ಇನ್ನೂ ಸ್ತಬ್ಧವಾಗಿರುವಂತೆ ಕಾಣುತ್ತದೆ. ಬಹುಶಃ ಅವನ ಗೈರುಹಾಜರಿ ಅವರಿಗಿನ್ನೂ ಅನುಭವವಾಗಿರಲಿಕ್ಕಿಲ್ಲ. ಕಳೆದ ರಾತ್ರಿ ಹುಡುಗ ಅವನ ಚಿಕ್ಕಮ್ಮನ ಮನೆಯಲ್ಲೋ, ಮತ್ಯಾರೋ ನೆಂಟರ ಮನೆಯಲ್ಲೋ